## ಅಭಿವೃದ್ಧಿ ಕಾಮಗಾರಿ

**3822(4532); ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)**

ಅ) ಚಿಕ್ಕಬಳ್ಳಾಪುರ ಜಿಲ್ಲಾ ವ್ಯಾಪ್ತಿಯಲ್ಲಿ ಮಾಹಿತಿ ತಂತ್ರಜ್ಞಾನ ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ತಂತ್ರಜ್ಞಾನ ಇಲಾಖೆ 2014–15ನೇ ಸಾಲಿಗೆ ಹಮ್ಮಿಕೊಂಡಿರುವ ಅಭಿವೃದ್ಧಿ ಯೋಜನೆಗಳು ಯಾವುವು; ಇದರ ಒಟ್ಟು ಮೊತ್ತ ಎಷ್ಟು;

ಆ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಇಲಾಖೆ ಹಮ್ಮಿಕೊಂಡಿರುವ ಅಭಿವೃದ್ಧಿ ಕಾಮಗಾರಿಗಳ, ಅದರ ಪ್ರಗತಿ ಹಾಗೂ ಮೊತ್ತ ಎಷ್ಟು (ವಿಧಾನ ಸಭೆ ಕ್ಷೇತ್ರವಾರು ವಿವರ ನೀಡುವುದು);

ಇ) ಅಭಿವೃದ್ಧಿ ಕಾಮಗಾರಿಗಳು ಯಾವ ಹಂತದಲ್ಲಿವೆ; ಯಾವಾಗ ಪೂರ್ಣಗೊಳಿಸಲಾಗುವುದು;

ಈ) ಕಾಮಗಾರಿಗಳ ಗುಣಮಟ್ಟವನ್ನು ವೀಕ್ಷಣೆಗೆ ಮೂರನೇ ಪಾರ್ಟಿ ವಿಕ್ಷಣೆ ಮಾಡಿಸಲಾಗಿದೆಯೇ; ಹಾಗಿದ್ದಲ್ಲಿ ಅವರ ವಿವರ ಒದಗಿಸುವುದು;

ಉ) ಗುಣಮಟ್ಟ ಕಾಮಗಾರಿಗೆ ಯಾವ ಮಾದರಿಯ ಕ್ರಮಕ್ಕೆಗೊಳ್ಳಲಾಗಿದೆ; ಗುತ್ತಿಗೆ ನೀಡುವ ಕಾರ್ಯದಲ್ಲಿ ಯಾವ ಮಾನದಂಡ ಅನುಸರಿಸಲಾಗಿದೆ;

ಊ) ಗುತ್ತಿಗೆದಾರರು ಸಮಯಕ್ಕೆ ಸರಿಯಾಗಿ ಕೆಲಸ ಪೂರೈಸದಿದ್ದರೆ ಅಥವಾ ಕೆಲಸ ಕಾಮಗಾರಿಯಾಗಿದ್ದರೆ ಅಂತವರ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ?

**ಶ್ರೀ ಎಸ್.ಆರ್. ಪಾಟೀಲ್ (ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)**

ಅ) ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಮುಖಾಂತರ ರಾಜ್ಯ ಸರ್ಕಾರದ ಸಂಪೂರ್ಣ ಅನುದಾನದಿಂದ ಒಂದು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರವನ್ನು ಸ್ಥಾಪಿಸಲು ಸನ್ಮಾನ್ಯ ಮುಖ್ಯ ಮಂತ್ರಿಗಳ 2014–15ರ ಆಯವ್ಯಯ ಭಾಷಣದಲ್ಲಿ ಘೋಷಿಸಲಾಗಿದೆ. ಈ ಉದ್ದೇಶಿತ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರಕ್ಕೆ ಒಟ್ಟು ₹ 3.00 ಕೋಟಿಗಳ ಅನುದಾನವನ್ನು ಇಲಾಖಾವತಿಯಿಂದ ನೀಡಲಾಗುವುದು.

ಆ) ಮತ್ತು ಇ) ಗೌರಿಬಿದನೂರಿನಲ್ಲಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ಸ್ಥಾಪನೆಗೆ ಐದು ಎಕರೆ ಜಮೀನಿನ ಅಗತ್ಯವಿದ್ದು, ಈ ಸಂಬಂಧ ಅವಶ್ಯವಿರುವ 5 ಎಕರೆ ಜಮೀನನ್ನು ನೀಡಲು ಇಲಾಖೆಯು ಚಿಕ್ಕಬಳ್ಳಾಪುರ ಪತ್ರ ಬರೆಯಲಾಗಿದೆ. ಜಿಲ್ಲಾಡಳಿತವು ಅಗತ್ಯವಾದ ಐದು ಎಕರೆ ಜಮೀನು ನೀಡಿದ ನಂತರ, ಈ ಉದ್ದೇಶಿತ ವಿಜ್ಞಾನ ಕೇಂದ್ರವನ್ನು ಮುಂದಿನ ಎರಡು ವರ್ಷಗಳ ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು.

ಈ) ಅನ್ವಯಿಸುವುದಿಲ್ಲ

ಉ) ಅನ್ವಯಿಸುವುದಿಲ್ಲ

ಊ) ಅನ್ವಯಿಸುವುದಿಲ್ಲ